O.S .No. 129/2014
PW-1

ದಿನಾಂಕ: 05-10-2023 ರಂದು ಸಾಕ್ಷಿಗೆ ಪ್ರಮಾಣ ವಚನ ಭೋದಿಸಲಾಯಿತು.

**ಮುಂದುವರೆದ ಪಾಟೀ ಸವಾಲು 1 ರಿಂದ 3, 6(ಎ), (ಬಿ) ಮತ್ತು 7 ನೇ ಪ್ರತಿವಾದಿ ಪರ ಶ್ರೀ ಸಿ.ಆರ್. ವಕೀಲರಿಂದಃ**

ಸ.ನಂ.35/4 ನ್ನು ನನ್ನ ತಂದೆ 1 ನೇ ಜವರೇಗೌಡ, 2 ನೇ ಸುಬ್ಬೇಗೌಡ, 3 ನೇ ಬೋರೇಗೌಡ ಹಾಗೂ 4 ನೇ ಮೈನರ್ ಅಜ್ಜೇಗೌಡರವರಿಂದ ಖರೀದಿ ಮಾಡಿರುತ್ತಾರೆ. ಕಾಡುಸಿದ್ದೇಗೌಡನ ತಂದೆ ಹೆಸರು ಗೊತ್ತಿಲ್ಲ. ಕಾಡುಸಿದ್ದೇಗೌಡ ಹಾಗೂ ಜವರೇಗೌಡ ರವರ ಸಂಬಂಧ ಏನು ಎಂದರೆ ಸಾಕ್ಷಿ ಚಿಕ್ಕಪ್ಪ ದೊಡ್ಡಪ್ಪನ ಮಕ್ಕಳು ಎಂದು ಹೇಳುತ್ತಾರೆ.

ನಿಪಿ-1 ಕ್ಕೆ ಕಾಡುಸಿದ್ದೇಗೌಡ ಹಾಗೂ ಅವರ ಮಕ್ಕಳು ಸಹಿ ಮಾಡಿಲ್ಲ ಎಂದರೆ ಸರಿ. ನಿಪಿ-1 ರಂತೆ ಸ.ನಂ.35/4 ರ ಚೆಕ್ಕುಬಂಧಿ ಪೂರ್ವಕ್ಕೆಃ ಸಿದ್ದೇಗೌಡರ ಜಮೀನು, ಪಶ್ಚಿಮಕ್ಕೆಃ ಹಾಳೇಗೌಡ ರವರ ಜಮೀನು, ಉತ್ತರಕ್ಕೆಃ ಕಾಡಸಿದ್ದೇಗೌಡರ ಜಮೀನು ಮತ್ತು ದಕ್ಷಿಣಕ್ಕೆಃ ಸರ್ಕಾರಿ ಓಣಿ ಮತ್ತು ಕೆರೆ. ಸ.ನಂ.35/1 ರ ಚೆಕ್ಕುಬಂಧಿ ಗೊತ್ತಾ ಎಂದರೆ ಸಾಕ್ಷಿ ಪೂರ್ವಕ್ಕೆಃ ರಾಮೇಗೌಡರ ಮತ್ತು ಕಾಳಮ್ಮ ರವರ ಜಮೀನು, ಪಶ್ಚಿಮಕ್ಕೆಃ ಖರಾಬು, ಉತ್ತರಕ್ಕೆಃ ನರಸಾಚಾರ ರವರ ಜಮೀನು ಮತ್ತು ದಕ್ಷಿಣಕ್ಕೆಃ ನಾನು ಕ್ರಯಕ್ಕೆ ಪಡೆದ ಜಮೀನು. ಸ.ನಂ.35/1 ರ ಪಶ್ಚಿಮಕ್ಕೆ ನೀರು ಹರಿಯುವ ಹಳ್ಳ ಮತ್ತು ನಾಗರಾಜೇಗೌಡ ಮತ್ತು ಜಯರಾಮೇಗೌಡ ರವರ ಜಮೀನು ಎಂದರೆ ಸಾಕ್ಷಿ ಖಾರಾಬು ಪಕ್ಕದಲ್ಲಿದೆ ಎಂದು ಹೇಳುತ್ತಾರೆ.

ಸ.ನಂ.35/1 ಕಾಡಸಿದ್ದೇಗೌಡ, ನಂತರ ಅವರ ಮಕ್ಕಳಾದ 6 ಮತ್ತು 7 ನೇ ಪ್ರತಿವಾದಿಗಳ ಹೆಸರಿಗೆ ಬಂದಿರುತ್ತದೆಂದರೆ ಸಾಕ್ಷಿ 1992 ರಲ್ಲಿ ಖಾತೆ ಮಾಡಿಸಿಕೊಂಡಿದ್ದಾರೆ ಎಂದು ಹೇಳುತ್ತಾರೆ. 1992 ರ ಪೂರ್ವದಲ್ಲಿ ಸ.ನಂ.35/1, 6 ಮತ್ತು 7 ನೇ ಪ್ರತಿವಾದಿಗಳ ತಂದೆಯ ಹೆಸರಿನಲ್ಲಿತ್ತು ಎಂದರೆ ಸುಳ್ಳು. ನಿಪಿ-1 ರಂತೆ ಕ್ರಯಕ್ಕೆ ಪಡೆದು ಸುಮಾರು 50 ವರ್ಷಗಳಾಗಿವೆ ಎಂದರೆ ಸರಿ. ಕ್ರಯಕ್ಕೆ ಪಡೆದ ಜಮೀನಿನಲ್ಲಿ ನೀವು ಸ್ವಾಧೀನ ಹೊಂದಿ ಬಾಳೆ ಬೆಳೆಯನ್ನು ಸಹ ಬೆಳೆದಿರುತ್ತೀರಿ ಎಂದರೆ ಸರಿ. ಸಾಕ್ಷಿ ಮುಂದುವರೆದು ಸ.ನಂ.35/4 ರಲ್ಲಿ ಬೆಳೆದಿಲ್ಲ, ಸ.ನಂ.35/1 ರಲ್ಲಿ ಬೆಳೆದಿದ್ದೇನೆ ಎಂದು ಹೇಳುತ್ತಾರೆ. ಸ.ನಂ.35/4 ರಲ್ಲಿ ಯಾರು ಸ್ವಾಧೀನ ಇದ್ದಾರೆಂದರೆ ಸಾಕ್ಷಿ ನಾವೇ ಇದ್ದೇವೆ ಎಂದು ಹೇಳುತ್ತಾರೆ. ಸ.ನಂ.35/4 ನಮ್ಮ ತಂದೆಯಿಂದ ಪಾಲು ಪಾರಿಕತ್ ನಲ್ಲಿ ನನಗೆ ಬಂದಿರುತ್ತದೆ.

ಪ್ರಸ್ತುತ ದಾವೆಯನ್ನು ಹೂಡುವ ಪೂರ್ವದಲ್ಲಿ ಮಾನ್ಯ ಹಿರಿಯ ಸಿವಿಲ್ ನ್ಯಾಯಾಲಯದಲ್ಲಿ ಅಸಲು ದಾವೆ ಸಂ.92/2014 ರಲ್ಲಿ ಪ್ರತಿವಾದಿಗಳ ಮೇಲೆ ದಾವೆ ಹೂಡಿದ್ದೀರಿ

ಎಂದರೆ ಸರಿ. ಸದರಿ ದಾವೆ ವಜಾ ಆಯಿತೆಂದರೆ ಸರಿಯಲ್ಲ. ಸದರಿ ದಾವೆ ದಾಖಲು ಮಾಡಿದ ಬಗ್ಗೆ ವಾದ ಪತ್ರದಲ್ಲಿ ಬರೆಸಿಲ್ಲ ಎಂದರೆ ಸಾಕ್ಷಿ ಬರೆಸಿರುತ್ತೇನೆ ಎಂದು ಹೇಳುತ್ತಾರೆ.

**(ಈ ಹಂತದಲ್ಲಿ ಮುಂದುವರೆದ ಪಾಟೀಸವಾಲಿಗೆ ಕಾಲಾವಕಾಶ ಕೋರಿದ್ದರಿಂದ, ಆಲಿಸಿ ಅನುಮತಿಸಲಾಯಿತು).**

ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು.

ಓ.ಹೇ.ಕೇ.ಸರಿ ಇದೆ.

ಪ್ರಧಾನ ಸಿವಿಲ್ ಮತ್ತು ಜೆ.ಎಂ.ಎಫ್.ಸಿ.
ನ್ಯಾಯಾಧೀಶರು, ಹುಣಸೂರು.